## 15

# “ಅಲ್ಲಿ ಒಂದು ವಿಭಜನೆ ಆಯಿತು”

## (7:1-53)

ಯೇಸುವು ಅನೇಕ ಭಿನ್ನವಾದ ಬಿರುದುಗಳಿಂದ ತಿಳಿಯಲ್ಪಟ್ಟಿರುತ್ತಾನೆ. “ಘನನಾದ ಕ್ರಿಸ್ತನು,” “ಅಸಮಾನವಾದ ಕ್ರಿಸ್ತನು,” ಇಲ್ಲವೇ ಬಾರ್ಕ್ಲೆಯವರ ವ್ಯಕ್ತಪಡಿಸುವಿಕೆ “ಸರ್ವ - ಸಮರ್ಥನಾದ ಕ್ರಿಸ್ತನು” ಎಂಬ ಬಿರುದುಗಳು ಕೊಡಲ್ಪಟ್ಟಿವೆ. ಹೀಗಿದ್ದರೂ, ಯೇಸುವಿನ ಬಗ್ಗೆ ಇತರ ವಿವರಣೆಗಳು ಅಷ್ಟೇ ಸತ್ಯವಾದವುಗಳೂ ಮಹತ್ವದವುಗಳೂ ಆಗಿರುತ್ತವೆ. ಆತನು “ವಿವಾದಾತ್ಮಕ ಕ್ರಿಸ್ತನು,” “ವಿಭಾಗಿಸುವ ಕ್ರಿಸ್ತನು” ಇಲ್ಲವೇ “ಧ್ರುವೀಕರಿಸುವ ಕ್ರಿಸ್ತನು,” ಎಂದು ಕರೆಯಲ್ಪಡ ಬಹುದು, ಯಾಕಂದರೆ ಆತನು ಹೋದಲ್ಲೆಲ್ಲಾ ಬಹಳ ತೀಕ್ಷ್ಣವಾದ ಪ್ರತಿಕ್ರಿಯೆಗಳಿಗೂ ಮಹಾ ಚರ್ಚೆಗೂ ಕಾರಣನಾದನು.

ಯೋಹಾನ 7ನ್ನು ನಾವು ತಲುಪುವುದರೊಳಗೆ, ಯೇಸುವಿನ ಗುರುತನ್ನು ಕುರಿತು ಮಹತ್ವದ ಪುರಾವೆಯನ್ನು ಎದುರಿಸಿದ್ದೇವೆ. ನಾವು ಈಗಾಗಲೇ ಸ್ನಾನಿಕನಾದ ಯೋಹಾನನ ಸಾಕ್ಷಿಯನ್ನು, ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ ಅದ್ಭುತ ಕಾರ್ಯವನ್ನು, ದೇವಾಯಲವನ್ನು ಶುದ್ಧೀಕರಿಸಿದ್ದನ್ನು, ಸಮಾರ್ಯದಲ್ಲಿ ಭಕ್ತಿಸಂಜೀವನವನ್ನು, ಅಧಿಕಾರಿಯ ಮಗನನ್ನು ಮತ್ತು ನಡೆಯಲಾಗದ ಮನುಷ್ಯನನ್ನು ಗುಣಪಡಿಸಿದ್ದನ್ನು, ಐದು ಸಾವಿರ ಜನರಿಗೆ ಊಟ ಕೊಟ್ಟಿದ್ದನ್ನು ಮತ್ತು ಜೀವದ ರೊಟ್ಟಿಯ ಪ್ರಸಂಗವನ್ನು ನೋಡಿದ್ದೇವೆ. ಈ ಮಾಹಿತಿಯಿಂದ ನಾವೇನು ಮಾಡ ಬೇಕು? 7ಮತ್ತು 8ನೆಯ ಅಧ್ಯಾಯಗಳು ಆತನ ಹೇಳಿಕೆಗಳಿಗೆ ಜನರ ಗುಂಪುಗಳು ಹೇಗೆ ಪ್ರತಿಕ್ರಿಯೆ ತೋರಿಸಿದವೆಂಬುದನ್ನು ನಾವು ಗಮನಿಸುವಂತೆ ಮಾಡುವದರಿಂದ “ಯೇಸುವು ಯಾರಾಗಿದ್ದಾನೆ?” ಪ್ರಶ್ನೆಯಿಂದ ಹಿಡಿತಕ್ಕೆ ಬರಲು ನಮಗೆ ಸಹಾಯ ಮಾಡುತ್ತವೆ. ಕೆಲವರು ಆತನನ್ನು ನಂಬಿದರು ಮತ್ತು ಕೆಲವರು ನಂಬಲಿಲ್ಲ, ಹಾಗೂ ಕೆಲವರು ಆತನನ್ನು ಕೊಲ್ಲಲು ಬಯಸಿದರು.

ಪರ್ಣ ಶಾಲೆಗಳ ಹಬ್ಬಕ್ಕೆ ಸಮಯವು ಸಮೀಪಿಸುತ್ತಿರುವಾಗ ಯೇಸುವು ಗಲಿಲಾಯ ದಲ್ಲಿರುವದರೊಂದಿಗೆ 7ನೆಯ ಅಧ್ಯಾಯವು ಪ್ರಾರಂಭವಾಗುತ್ತದೆ. ಪಸ್ಕ ಹಬ್ಬದಂತೆ ಇದು ಕ್ರೈಸ್ತರಿಗೆ ಪರಿಚಿತವಾಗಿರದಿದ್ದರೂ, ಯೇಸುವಿನ ದಿನದಲ್ಲಿ ಅದಕ್ಕೆ ಬಹಳ ಮಹತ್ವವಿತ್ತು. “ಬೆಳೆ ಕಾಣಿಕೆ ಹಬ್ಬ” ಇಲ್ಲವೇ “ಗುಡಾರಗಳ ಹಬ್ಬ” ಎಂದೂ ಸಹ ಕರೆಯಲ್ಪಡುತ್ತಿದ್ದು, ಪರ್ಣಶಾಲೆಗಳ ಹಬ್ಬವು ಯೆಹೂದ್ಯರ ಮೂರು ದೊಡ್ಡ ವಾರ್ಷಿಕ ಹಬ್ಬಗಳಲ್ಲಿ ಒಂದಾಗಿತ್ತು. ಇದು ಪಸ್ಕ ಹಬ್ಬದ ನಂತರ ಆರು ತಿಂಗಳಾದ ಮೇಲೆ, ಅಕ್ಟೋಬರ್, ಮಧ್ಯದಲ್ಲಿ ನಡೆಯುತ್ತಿತ್ತು. ಈ ಹಬ್ಬದ ಸಮಯದಲ್ಲಿ ಮರದ ಕೊಂಬೆಗಳನ್ನು ಹೆಣೆದು ಮಾಡಿದ ಆಶ್ರಮಗಳಲ್ಲಿ ಒಂದು ವಾರದವರೆಗೆ ಪ್ರತಿ ರಾತ್ರಿ ಬಾಗಿಲುಗಳ ಹೊರಗೆ ಮಲಗುತ್ತಿದ್ದರು. ಇದು ಅವರ ಪೂರ್ವಜರು ಅರಣ್ಯದಲ್ಲಿ ಅಲೆಯುತ್ತಿದ್ದಾಗ ನಕ್ಷತ್ರಗಳ ಕೆಳಗೆ ಒಮ್ಮೆ ಮಲಗಿದ್ದರು ಎಂಬುದನ್ನು ಅವರ ಜ್ಞಾಪಕಕ್ಕೆ ತರುತ್ತಿತ್ತು. ಅದು ಸುಗ್ಗಿಯ ಹಬ್ಬದ ನಂತರ ಬರುತ್ತಿದ್ದುದರಿಂದ, ಬೆಳೆಗಳ ಯಶಸ್ಸಿಗಾಗಿ ಕೃತಜ್ಞತೆ ಸಲ್ಲಿಸುವದ ರೊಂದಿಗೂ ಸಂಬಂಧಿಸಲ್ಪಟ್ಟಿತ್ತು. ಪರ್ಣಶಾಲೆಗಳ ಹಬ್ಬವು ಸಂಭ್ರಮದ ಸಮಯವಾಗಿತ್ತು ಮತ್ತು ಬಹುಶಃ ಯೆಹೂದಿ ಮಕ್ಕಳಿಗೆ ವರ್ಷದ ಒಂದು ಮೆಚ್ಚಿಕೆಯ ಸಮಯವಾಗಿತ್ತು. ಗುಡ್‌ಸ್ಪೀಡ್ ಎಂಬುವರು ಇದನ್ನು “ಯೆಹೂದ್ಯರ ಶಿಬಿರದ ಹಬ್ಬ”[1] ಎಂದು ಭಾಷಾಂತರಿಸಿದ್ದಾರೆ.

ಹಬ್ಬಕ್ಕಾಗಿ ಸಮಯವು ಹತ್ತಿರವಾಗುತ್ತಿರುವಾಗ, ದೇಶದ ಬೇರೆ ಬೇರೆ ಕಡೆಗಳಿಂದ ಜನರು

ಯೆರೂಸಲೇಮಿಗೆ ಪ್ರಯಾಣ ಪ್ರಾರಂಭಿಸಿದರು. ಯೇಸುವಿನ ತಮ್ಮಂದಿರೂ ಸಹ ಯೇಸುವನ್ನು ಹಬ್ಬಕ್ಕೆ ಹೋಗಬೇಕೆಂದು ಒತ್ತಾಯಿಸಿದರು. "... ನಿನ್ನನ್ನು ಲೋಕಕ್ಕೆ ತಿಳಿಯ ಪಡಿಸಿಕೋ" ಎಂದು ಹೇಳಿದರು (7:4). "ಆತನ ಅಣ್ಣ ತಮ್ಮಂದಿರು ಸಹ ಆತನನ್ನು ನಂಬದೇ ಇದ್ದರು" (7:5) ಎಂಬುದು ಇದಕ್ಕೆ ಕಾರಣವಿದ್ದಂತೆ ತೋರುತ್ತದೆ. ಅವರು ಅಪಹಾಸ್ಯ ಮಾಡುವ ರೀತಿ ಯಲ್ಲಿ ಮಾತಾಡಿದರು. "ಈ ದೇಶದ ಜನರು ನಿನ್ನ ಸುತ್ತಲೂ ಹಿಂಬಾಲಿಸುವುದರಿಂದ ನೀನು ಯಾರೋ ಒಬ್ಬ ವಿಶೇಷವಾದನಂತೆ ಯೋಚಿಸುತ್ತಿರುವಿಯೋ. ಯೆರೂಸಲೇಮಿನ ದೊಡ್ಡ ಪಟ್ಟಣಕ್ಕೆ ನೀನು ಯಾಕೆ ಹೋಗ ಬಾರದು, ಅಲ್ಲಿಯ ಜನರು ಸುಧಾರಿಸಿದವರಾಗಿದ್ದಾರೆ. ಅಲ್ಲಿ ಯಾರಾದರೂ ನಿನ್ನನ್ನು ಹಿಂಬಾಲಿಸುವರೋ ಎಂದು ನೋಡಿಕೋ" ಎನ್ನುವ ರೀತಿಯಲ್ಲಿ ಅವರು ಮಾತಾಡಿದರು, ಅವರು ಇನ್ನೂ ಭೂಲೋಕದ ಮಾತುಗಳಲ್ಲಿ ಯೋಚಿಸುತ್ತಿದ್ದರು. ಯೇಸುವನ್ನು ಒಬ್ಬ ಪ್ರಾಥಮಿಕವಾಗಿ ರಾಜಕೀಯ ವ್ಯಕ್ತಿಯಂತೆ ದೃಷ್ಟಿಸಿದರು. ಯೇಸುವಿನ ಮೊದಲ ಪ್ರತಿಕ್ರಿಯೆಯು ಗಲಿಲಾಯದಲ್ಲಿ ಉಳಿದುಕೊಳ್ಳುವದಾಗಿತ್ತು ಮತ್ತು ಹಬ್ಬಕ್ಕೆ ಹೋಗ ಬಾರದೆಂಬುದಾಗಿತ್ತು. ಯೆರೂಸಲೇಮಿನಲ್ಲಿ ತನ್ನ ಜೀವಕ್ಕೆ ಅಪಾಯವಿದೆಯೆಂದು ತಿಳಿದಿದ್ದನು (5:18; 7:1) ಮತ್ತು ತಂದೆಯ ವೇಳಾಪಟ್ಟಿಯನ್ನು ಬಿಟ್ಟು ಬೇರೆಯ ಕಾಲ ಕ್ರಮಕ್ಕೆ ಅನುಸಾರ ನಡೆಯುವದನ್ನು ತಿರಸ್ಕರಿಸಿದನು (7:6, 8, 30).
ಅದರ ಪ್ರಕಾರ ಆತನು ಗಲಿಲಾಯದಲ್ಲಿ ಉಳಿದು ಕೊಂಡು, ಆತನ ಸಹೋದರರು ಮುಂದಾಗಿ ಹಬ್ಬಕ್ಕೆ ಹೋಗುವಂತೆ ಮಾಡಿದನು.

ಆತನ ಸಹೋದರರು ಹೊರಟು ಹೋದನಂತರ, ಯೇಸುವು ತಾನೇ ಹಬ್ಬಕ್ಕೆ ಹೋದನು, ಆದರೆ ಆತನ ಸಹೋದರರು ಸೂಚಿಸಿದ ರೀತಿಯಲ್ಲಿ ಅಲ್ಲ. ಆತನು ಮೌನವಾಗಿ ಯೆರೂಸ ಲೇಮಿಗೆ ಹೋದನು ಮತ್ತು ತನ್ನ ಗುರುತನ್ನು ರಹಸ್ಯವಾಗಿ ಇಟ್ಟನು.

## "ನನ್ನ ಬೋಧನೆಗಳು ಮೇಲಣಿಂದ ಬಂದವುಗಳು"

ತನ್ನ ಸುವಾರ್ತೆಯಲ್ಲಿ ಈ ಹಂತದಲ್ಲಿ, ಯೋಹಾನನು ಪರ್ಣಶಾಲೆಗಳ ಹಬ್ಬದ ಸಮಯದಲ್ಲಿ ಯೇಸುವಿನ ಬೋಧನೆಗಳಿಗೆ ಯೆರೂಸಲೇಮಿನಲ್ಲಿ ಜನರ ಗುಂಪುಗಳು ಹೇಗೆ ಪ್ರತಿಕ್ರಿಯೆ ತೋರಿಸಿದವು ಎಂಬುದನ್ನು ಕೇಂದ್ರೀಕರಿಸಲು ಪ್ರಾರಂಭಿಸಿದನು. ಯೇಸುವು ಪಟ್ಟಣದಲ್ಲಿ ಸುತ್ತುತ್ತ, ಪರಿಚಯವಿಲ್ಲದವನಂತೆ ಹೋಗುತ್ತ, ನಜರೇತಿನ ಯೇಸುವಿನ ಬಗ್ಗೆ ಜನರು ಕಾವೇರಿದ ಚರ್ಚೆಮಾಡುತ್ತಿರುವದನ್ನು ಆಲಿಸುತ್ತಿರುವದನ್ನು ನಾವು ಚಿತ್ರಿಸಿ ಕೊಳ್ಳಬಹುದು. ಈ ಮಧ್ಯದಲ್ಲಿ, ಯೆಹೂದಿ ನಾಯಕರು ಭಯದಿಂದ ಆತನು ಬರುವದಕ್ಕಾಗಿ ಕಾಯುತ್ತಿದ್ದರು, ಆತನೊಂದಿಗೆ ಇನ್ನೊಂದು ಘರ್ಷಣೆಯನ್ನು ನಿರೀಕ್ಷಿಸುತ್ತಿದ್ದರು. ಜನರ ಗುಂಪುಗಳು ತಾವೇ ಯೇಸುವಿನ ಬಗ್ಗೆ ವಿಭಾಗವಾಗಿದ್ದವು. ಕೆಲವರು, "ಆತನು ಒಳ್ಳೆಯ ಮನುಷ್ಯನು" ಎಂದು ಹೇಳಿದರು. ಇನ್ನೂ ಕೆಲವರು, "ಆತನು ಜನರನ್ನು ತಪ್ಪು ಮಾರ್ಗಕ್ಕೆ ಎಳೆಯುತ್ತಾನೆ" ಎಂದು ಹೇಳುತ್ತಿದ್ದರು (7:12). ಈ ಚರ್ಚೆಯು ಭಯವುಳ್ಳ ಪಿಸುಗುಟ್ಟುವಿಕೆಯಲ್ಲಿ ಮುಂದುವರಿಯಿತು, ಯಾಕಂದರೆ ಜನರು ತಮ್ಮ ಬಲಶಾಲಿ ನಾಯಕರಿಗೆ ಭಯಪಡುತ್ತಿದ್ದರು. ಅಧಿಕಾರವುಳ್ಳ ಜನರು ಯೇಸುವನ್ನು ಕೊಲ್ಲುವದಕ್ಕೆ ನೋಡುತ್ತಿದ್ದಾರೆ ಹಾಗೂ ಆತನ ಪರವಾಗಿ ಹೋಗುವವರಿಗೂ ಅದೇ ಅಂತ್ಯ ಬರುವುದು ಎಂಬ ಸುದ್ದಿ ಎಲ್ಲಾ ಕಡೆಗಳಲ್ಲಿ ಹಬ್ಬಿತು!

ಹಬ್ಬದ ಮಧ್ಯದಲ್ಲಿ ಒಂದು ಸಮಯದಲ್ಲಿ, ಯೇಸುವು ದೇವಾಲಯಕ್ಕೆ ಹೋಗಿ ಜನರು ಕೂಡಿದ್ದ ಸ್ಥಳದಲ್ಲಿ ಆತನು ಬೋಧಿಸಲಿಕ್ಕೆ ಪ್ರಾರಂಭಿಸಿದನು. ಯೆಹೂದಿ ನಾಯಕರು ಆತನ ಜ್ಞಾನದ ಬಗ್ಗೆ ಆಶ್ಚರ್ಯಪಟ್ಟರು. "ಇವನು ಎಂದೂ ವಿದ್ಯಾಭ್ಯಾಸ ಮಾಡಿದವನಲ್ಲ" ಎಂದು ಬೆರಗಾದರು (7:15)[2] ಯೇಸುವು ತಾನು ಬೋಧನೆಯ ಮೂಲವಲ್ಲ, ಆದರೆ ತನ್ನನ್ನು ಕಳುಹಿಸಿದಾತನಿಂದ ಬಂದಿದ್ದು ಎಂದು ಒತ್ತಿ ಹೇಳಿದನು. ಇದಲ್ಲದೇ, ಯೇಸುವು ತನ್ನ ಕೇಳುಗರಿಗೆ, ಯಾವನಾದರೂ ತಂದೆಯ ಚಿತ್ತವನ್ನು ಮಾಡಲು ಬಯಸಿದರೆ, ತನ್ನ

ಬೋಧನೆಗಳು ಸತ್ಯವಾದವುಗಳೋ ಇಲ್ಲವೋ ಎಂಬುದನ್ನು ತೀರ್ಮಾನಿಸಲು ಶಕ್ತನಾಗುವನು ಎಂದು ಭರವಸೆ ಕೊಟ್ಟನು (7:16-19): "ಅದಕ್ಕೆ ಯೇಸು - ನಾನು ಹೇಳುವ ಬೋಧನೆಯು ನನ್ನದಲ್ಲ, ನನ್ನನ್ನು ಕಳುಹಿಸಿದಾತನದು. ಆತನ ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸಿದೆಯೋ ಅವರಿಗೆ ಈ ಬೋಧನೆಯು ದೇವರಿಂದ ಬಂದದ್ದೋ ನಾನೇ ಕಲ್ಪಿಸಿ ಹೇಳಿದ್ದೋ ಗೊತ್ತಾಗುವದು ... ಎಂದು ಹೇಳಿದನು."

ವಿಧೇಯತೆಗೂ ಮತ್ತು ನಂಬಿಕೆಗೂ ಮಧ್ಯದಲ್ಲಿ ಸಂಬಂಧವು ಅಗತ್ಯವಾದ ಹೊಂದಾಣಿಕೆಯಾಗಿದೆ. ಒಬ್ಬ ಲೇಖಕನು ಈ ರೀತಿಯಲ್ಲಿ ಹೇಳಿದನು: "ನಂಬುವವನು ಮಾತ್ರವೇ ವಿಧೇಯನಾಗುವನು, ಮತ್ತು ವಿಧೇಯನಾಗುವವನು ಮಾತ್ರವೇ ನಂಬುತ್ತಾನೆ"[3] ಈ ಸತ್ಯವು "Trust and Obey" ಎಂಬ ಸಂಗೀತದಲ್ಲಿ ಸುಂದರವಾಗಿ ವ್ಯಕ್ತಪಡಿಸಲ್ಪಟ್ಟಿದೆ:

> ಆದರೆ ನಾವೆಂದೂ ರುಜುವಾತು ಪಡಿಸಲಾರೆವು ಆತನ ಪ್ರೀತಿಯ ಆನಂದಗಳನ್ನು ಪೀಠದ ಮೇಲೆ ಎಲ್ಲವುಗಳನ್ನು ನಾವಿರುವವರೆಗೆ; ಆತನು ತೋರಿಸುವ ಮೆಚ್ಚಿಕೆಗಳು, ಆತನು ದಯಪಾಲಿಸುವ ಆನಂದವು, ಇರುವವು ನಂಬುವವರಿಗೆ ಮತ್ತು ವಿಧೇಯರಾಗುವವರಿಗೆ.[4]

ದೀನತೆಯ ಮತ್ತು ವಿಧೇಯತೆಯ ಆತ್ಮವು ನಮ್ಮನ್ನು ನಂಬಿಕೆಗೆ ನಡಿಸುವಂತೆ, ಗರ್ವದ ಮತ್ತು ದಂಗೆಯ ಆತ್ಮವು ದೇವರನ್ನು ಕಡೆಗಣಿಸಲು ಇಲ್ಲವೇ ತಿರಸ್ಕರಿಸಲು ಕಾರಣವಾಗುವುದೆಂದು ಯೇಸುವು ಪ್ರಕಟಿಸಿದನು.

ಗುಂಪಿನಲ್ಲಿದ್ದ ಕೆಲವರನ್ನು ಅವರು ತನ್ನನ್ನು ಕೊಲ್ಲುವದನ್ನು ಬಯಸಿದ್ದಕ್ಕಾಗಿ ಯೇಸುವು ಗದರಿಸಿದಾಗ, ಅವರು ತಮಗೆ ಅಂಥ ಉದ್ದೇಶವಿರುವದನ್ನು ಅಲ್ಲಗಳೆದರು ಮತ್ತು ಯೇಸುವಿಗೆ ದೆವ್ವ ಹಿಡಿದದೆ ಎಂದು ಹೇಳಿದರು (7:20). ಅವರ ಸ್ವಂತ ಮಾರ್ಗದಲ್ಲಿ, ಅವರು "ನೀನು ಹುಚ್ಚನಾಗಿದ್ದೀ!" ಎಂದು ಹೇಳುತ್ತಿದ್ದರು. ಹೀಗಿದ್ದರೂ, ಯೇಸುವು ಅವರಿಗೆ ವಿರುದ್ಧವಾಗಿದ್ದ ತನ್ನ ದೂರನ್ನು ಬಿಟ್ಟುಬಿಡದೆ, ನಡೆದಾಡದ ಮನುಷ್ಯನನ್ನು ಸ್ವಸ್ಥಪಡಿಸಿದ್ದರ ಬಗ್ಗೆ ಹೇಳುತ್ತಾ ಹೋದನು,[5] ಆ ಘಟನೆಯು ಮೊದಲು ಯೆರೂಸಲೇಮಿನಲ್ಲಿ ಯೆಹೂದಿ ನಾಯಕರು ಆತನನ್ನು ಕೊಲ್ಲಲು ಬಯಸುವಂತೆ ಮಾಡಿತು (7:21-24).

## "ನಾನು ಪರಲೋಕದಿಂದ ಬಂದಿದ್ದೇನೆ"

ಎದುರಿಸುವಿಕೆಯು ಮುಂದುವರಿದಂತೆ ಜನರ ಗುಂಪು ಇನ್ನೂ ಹೆಚ್ಚು ಗಲಿಬಿಲಿಗೆ ಒಳಗಾಯಿತು. ಬಹಳವಾಗಿ ಹೇಳಲ್ಪಟ್ಟ ಯೇಸುವು ಬಹಿರಂಗವಾಗಿ ದೇವಾಲಯದಲ್ಲಿ ಮಾತಾಡಲಿಕ್ಕೆ ಬಿಡಲ್ಪಟ್ಟಿದ್ದು ಕೆಲವರು ಆಶ್ಚರ್ಯಗೊಳ್ಳುವಂತೆ ಮಾಡಿತು (7:25, 26). ಯೇಸುವನ್ನು ನಿಲ್ಲಿಸಲಿಕ್ಕೆ ಯೆಹೂದಿ ನಾಯಕರು ಸೋತುಹೋದದ್ದು ಯೇಸುವು ನಿಜವಾಗಿ ಪ್ರವಾದಿಯಾಗಿರುವನು ಇಲ್ಲವೇ ಮೆಸ್ಸೀಯನಾಗಿರುವನೆಂದು ನಾಯಕರು ತೀರ್ಮಾನಕ್ಕೆ ಬಂದಿರುವ ಸಾಧ್ಯತೆ ಇದೆಯೆಂದು ಕೆಲವರು ಆಶ್ಚರ್ಯಪಟ್ಟರು. ಯೇಸುವು ನಜರೇತಿನಿಂದ ಬಂದಿರುವ ಸಂಗತಿಯಿಂದ ಇತರರು ಪೀಡಿಸಲ್ಪಟ್ಟರು (7:27). ಮೆಸ್ಸೀಯನು ಎಲ್ಲಿಂದ ಬರುವನೋ ಎಂಬುದು ಯಾರಿಗೂ ತಿಳಿದಿರುವದಿಲ್ಲ ಎಂದು ಅವರು ನಂಬಿದ್ದರು. ಪುನಃ, ಯೇಸುವು ತಂದೆಯಿಂದ ಬಂದಿರುವನೋ ಇಲ್ಲವೇ ಪಿಶಾಚನಿಂದ ಬಂದಿರುವನೋ ಎಂಬುವುದನ್ನು ತೀರ್ಮಾನಿಸಲು ಜನರು ಪ್ರಯತ್ನಿಸಿದಂತೆ ಜನರ ಗುಂಪಿನ ಗಲಿಬಿಲಿಯನ್ನೂ ಹೋರಾಟವನ್ನು ನೋಡುತ್ತೇವೆ.

ಮುಂದಿನ ದಾಖಲೆಯಾದ ಹೇಳಿಕೆಯು ದೇವಾಲಯದಲ್ಲಿ ಜನರ ಗುಂಪಿನಿಂದ ಕೇಳಲ್ಪಟ್ಟ ಪ್ರಶ್ನೆಗಳಿಗೆ ಒಂದು ಉತ್ತರವಾಗಿದೆ. ಪರಲೋಕದಲ್ಲಿಯ ತಂದೆಯಿಂದ ತಾನು

ಕಳುಹಿಸಲ್ಪಟ್ಟಿದ್ದೇನೆಂದು ಸುತ್ತಲಿನ ಎಲ್ಲಾ ಜನರಿಗೆ ಬಹಿರಂಗವಾಗಿ ಹೇಳುತ್ತ ಯೇಸುವು "ಕೂಗಿದನು" (7:28, 29): "... ನನ್ನನ್ನು ಬಲ್ಲಿರಿ, ನಾನು ಎಲ್ಲಿಯವನೆಂದು ಬಲ್ಲಿರಿ ನಿಜವೇ ಆದರೂ ನಾನು ನನ್ನಷ್ಟಕ್ಕೆ ಬಂದವನಲ್ಲ, ನನ್ನನ್ನು ಕಳುಹಿಸಿದಾತನು ನಿಜವಾದವನು; ನೀವು ಆತನನ್ನು ಅರಿತವರಲ್ಲ ...."

ಮತ್ತೋಮ್ಮೆ, ಯೇಸುವು ಜನರನ್ನು ಆಘಾತಕ್ಕೊಳಪಡಿಸಿಡಿದನು, ಅನೇಕರ ಮನನೋಯಿಸಿದನು ಮತ್ತು ಆತನು ಹೇಳಿದ್ದು ಸತ್ಯವೋ ಅಲ್ಲವೋ ಎಂಬುದನ್ನು ತೀರ್ಮಾನಿಸಲು ಪ್ರತಿಯೊಬ್ಬರನ್ನು ಒತ್ತಾಯಿಸಿದನು. ತಾನು ಯಾರಾಗಿದ್ದನು ಎಂಬುದರ ಬಗ್ಗೆ ಅಂಥ ಧೈರ್ಯದ ಹೇಳಿಕೆಗಳನ್ನು ಕೇಳಿದ ಮೇಲೆ ಈ ಮನುಷ್ಯ ಯೇಸುವಿನ ಬಗ್ಗೆ ಯಾರೂ ತಟಸ್ಥನಾಗಿರಲಾರರು!

## "ನನ್ನ ಬಳಿಗೆ ಬಂದು ಕುಡಿಯಲಿ"

ಯೆಹೂದಿ ನಾಯಕರುಗಳಿಗೆ, ದೇವಾಲಯದಲ್ಲಿಯ ಯೇಸುವಿನ ಮಾತುಗಳು ಗಂಡಾಂತರ ಕಾರಿಯಾದ ದೇವದೂಷಣೆಗಿಂತ ಕಡಿಮೆಯಾದವುಗಳಾಗಿರಲಿಲ್ಲ, ಯೇಸುವು ತಾನು ದೇವರ ಕುವಾರನು ಆಗಿದ್ದೇನೆಂದು ಹೇಳುತ್ತಿದ್ದ ಹೇಳಿಕೆಗಳನ್ನು ಈ ಜನರು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದರು. ಅದರ ಪರಿಣಾಮವಾಗಿ ಅವರು ಆತನನ್ನು ಬಂಧಿಸಲಿಕ್ಕೆ ಪ್ರಯತ್ನಿಸಿದರು. ಹೀಗಿದ್ದರೂ ಅವರು ಹಾಗೆ ಮಾಡಲು ಶಕ್ತರಾಗಿರಲಿಲ್ಲ, ಮತ್ತು ಯೇಸುವು ತಂದೆಯ ವೇಳಾ ಪತ್ರಿಕೆಯಿಂದ ಭಿನ್ನವಾದ ಯಾವುದೇ ವೇಳಾಪತ್ರಿಕೆಯಿಂದ ನಿಯಂತ್ರಿಸಲ್ಪಡುವದನ್ನು ನಿರಾಕರಿಸಿದನೆಂಬುದನ್ನು ಯೋಹಾನನು ನಮ್ಮ ಜ್ಞಾಪಕಕ್ಕೆ ತರುತ್ತಾನೆ (7:30). ಹೆಚ್ಚೆಚ್ಚಾದ ಜನರು ಯೇಸುವಿನಲ್ಲಿ ನಂಬಿಕೆಯಿಡಲು ಪ್ರಾರಂಭಿಸಿದಂತೆ ನಾಯಕರ ಅತಿಯಾದ ಭಯಗಳು ಕಂಡು ಬರಲಾರಂಭಿಸಿದವು (7:31). ಜನರು ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸುವದನ್ನು ಫರಿಸಾಯರು ಕೇಳಿದಾಗ, ಯೇಸುವನ್ನು ಹಿಡಿಯಲು ದೇವಾಲಯದ ಕಾವಲುಗಾರರನ್ನು ಕಳುಹಿಸಿದರು (7:32). ಪುನಃ ಅವರು ಆತನು ಸಿದ್ಧನಾಗುವವರೆಗೆ ಯೇಸುವನ್ನು ಬಂಧಿಸಲು ಶಕ್ತರಾಗಿರಲಿಲ್ಲ - ಅದು ಇನ್ನೂ ಕೆಲಸಮಯ ದೂರದಲ್ಲಿತು (7:33-36).

ಹಬ್ಬದ ಕೊನೆಯ ದಿನದಂದು ಯೇಸುವು ಪುನಃ ನಿಂತುಕೊಂಡನು ಮತ್ತು ಮೆಸ್ಸೀಯನಾಗಿರುವೆನೆಂದು ಬಹಿರಂಗವಾಗಿ ನಿವೇದಿಸಿದನು. ಈ ಸಂದರ್ಭದಲ್ಲಿ ಆತನು ತನ್ನನ್ನು ಜೀವಜಲದ ಮೂಲದಂತೆ ಮಾತಾಡಿದನು. ಪರ್ಣ ಶಾಲೆಗಳ ಹಬ್ಬದ ಭಾಗವಾಗಿ ಪ್ರಸಿದ್ಧವಾದ ಆಚರಣೆಯು ನಡೆಯುತ್ತಿದ್ದಾಗ ಬಹುಶಃ ಆತನು ಈ ಹೇಳಿಕೆಯನ್ನು ಕೊಟ್ಟನು. ಪ್ರತಿದಿನ ಒಬ್ಬ ಯಾಜಕನು ಸಿಲೋವ ಕೊಳಕ್ಕೆ ಹೋಗುವನು, ಬಂಗಾರದ ಪಾತ್ರೆಯಲ್ಲಿ ನೀರನ್ನು ತುಂಬಿಕೊಳ್ಳುವನು, ಮತ್ತು ಅದನ್ನು ಮೆರವಣಿಗೆಯಲ್ಲಿ ಹಿಂದಿರುಗಿ ತರುವನು. ಅಲ್ಲಿ ಅದು ದೇವರಿಗೆ ಕೃತಜ್ಞತಾಸ್ತುತಿಯ ಅರ್ಪಣೆಯಾಗಿ ಸುರಿಯಲ್ಪಡುವುದು.[6]

ಈ ಆನಂದಕರವಾದ ಆಚರಣೆಯು ಪ್ರಗತಿಯಲ್ಲಿದ್ದಾಗ, ಯೇಸುವು, "ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿನಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು" ಎಂದು ಕೂಗಿ ಹೇಳಿದನು (7:37, 38). ಈ ಹಂತದಲ್ಲಿ ಯೇಸುವಿನ ಬಗ್ಗೆ ಯೋಹಾನನು ಬರೆದದ್ದೂ ಅಷ್ಟೇ ಪ್ರಾಮುಖ್ಯವಾದದ್ದಾಗಿದೆ. ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪರಿಶುದ್ಧಾತ್ಮವನ್ನು ಕುರಿತು ಹೇಳಿದನು; "ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದ ಕಾರಣ ಪರಿಶುದ್ಧಾತ್ಮವು ಇನ್ನೂ ಬಂದಿರಲಿಲ್ಲ" (7:39).

ಹಬ್ಬದ ಸಮಯದಲ್ಲಿ ಯೇಸುವು ತನ್ನ ಬೋಧನೆಯನ್ನು ತೀಕ್ಷ್ಣಗೊಳಿಸಿದ್ದರಿಂದ, ಕೇಳಿದವರ ಪ್ರತಿಕ್ರಿಯೆಯೂ ತೀವ್ರವಾಯಿತು. ಹಬ್ಬದ ಅಂತ್ಯದಲ್ಲಿ ಕೆಲವರು, "ಈತನು ನಿಶ್ಚಯ

ವಾಗಿ ಒಬ್ಬ ಪ್ರವಾದಿಯಾಗಿದ್ದಾನೆ" ಎಂದು ಹೇಳುತ್ತಿರುವಾಗ ಇತರರು "ಈತನು ಕ್ರಿಸ್ತನು" ಎಂದು ಹೇಳುತ್ತಿದ್ದರು (7:40, 41). ಆ ಸಮಯಕ್ಕೆ ಅವರ ಉತ್ಸಾಹವು ರೊಟ್ಟಿ ಮೀನುಗಳನ್ನು ತಿಂದ ಗಲಿಲಾಯದಲ್ಲಿಯ ಐದು ಸಾವಿರ ಜನರ ಅತ್ಯಾಸಕ್ತಿಗೆ ಸಮಾನ ವಾದದ್ದಾಗಿತ್ತು (6:14). ಈ ಜನರು ಯೇಸುವನ್ನು ದೇವರಿಂದ ಕಳುಹಿಸಲ್ಪಟ್ಟಾತನೆಂದು ಸ್ವೀಕರಿಸಲು ಸಿದ್ಧರಾಗಿದ್ದರು. ಇತರರು ಯೇಸುವು ಹೇಳುತ್ತಿದ್ದುದರ ಬಗ್ಗೆ ವಿರೋಧ ವ್ಯಕ್ತಪಡಿಸಿದರು ಮತ್ತು ಕೆಲವರು ಆತನನ್ನು ಬಂಧಿಸುವದನ್ನು ಮುಂದುವರಿಸುವಷ್ಟು ಉಗ್ರಕೋಪವುಳ್ಳವರಾಗಿದ್ದರು. ಇಡೀ ಅಧ್ಯಾಯವನ್ನು ಸಾರಾಂಶಗೊಳಿಸುವಂತೆ ತೋರುವ ಸಮೀಕ್ಷೆಯಲ್ಲಿ, ಯೋಹಾನನು, "ಹೀಗೆ ಜನರಲ್ಲಿ ಆತನನ್ನು ಕುರಿತು ಭೇದ ಉಂಟಾಯಿತು" ಎಂದು ಬರೆದನು (7:43).

ದೇವಾಲಯದ ಅಧಿಕಾರಿಗಳು ಮಹಾಯಾಜಕರ ಬಳಿಗೆ ಹಿಂದಿರುಗಿ ಬಂದಾಗ, ಅವರು ಬರಿಗೈಯವರಾಗಿ ಬಂದರು. ಅವರೂ ಸಹ ಯೇಸುವಿನ ಬಗ್ಗೆ ಹಾಗೂ ಆತನು ಮಾಡಿದ ಬುದ್ಧಿವಂತಿಕೆಯ ಆಶ್ಚರ್ಯಕರವಾದ ಹೇಳಿಕೆಗಳ ಬಗ್ಗೆ ಭಕ್ತಿಯುಳ್ಳವರಾಗಿದ್ದರು. "ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದು ಮಾತಾಡಿದ್ದಿಲ್ಲ" ಎಂದು ಅವರು ಹೇಳಿದರು (7:46). ನಾಯಕರು ಇದನ್ನು ಕೇಳಿದಾಗ ಅವರು ಉಗ್ರಕೋಪದಿಂದ ಸಿಡಿಗೆದ್ದರು, ಮಹಾಯಾಜಕರು ಮತ್ತು ಫರಿಸಾಯರು ಅಧಿಕಾರಿಗೆ ಅಪಹಾಸ್ಯ ಮಾಡಿದರು. ಹಾಗೂ ಅವರಿಗೆ ಯೇಸುವಿನಿಂದ ಮೋಸಗೊಳಿಸಲ್ಪಟ್ಟ ಅಜ್ಞಾನಿಗಳೂ ಮೂರ್ಖರೂ ಆಗಿರುವರೆಂದು ಹೇಳಿದರು. "ಇಲ್ಲ!" ಎಂದು ಉತ್ತರವನ್ನು ನಿರೀಕ್ಷಿಸಿ, ನಾಯಕರು ಅಧಿಕಾರಿಗಳಿಗೆ, "ನೀವೂ ಮರುಳಾದಿರಾ? ಹಿರೀ ಸಭೆಯವರಲ್ಲಾಗಲಿ ಫರಿಸಾಯರಲ್ಲಾಗಲಿ ಯಾರಾದರೂ ಅವನನ್ನು ನಂಬಿದ್ದಾರೋ?" ಎಂದು ಕೇಳಿದರು (7:47, 48). ಆಗ ನಿಕೊದೇಮನು ಯೋಹಾನನ ಸುವಾರ್ತೆಯಲ್ಲಿ ಎರಡನೆಯ ಸಲ ಕಂಡು ಬರುವದನ್ನು ನೋಡುತ್ತೇವೆ.

ಯೆಹೂದಿ ಕೌನ್ಸಿಲಿನ ಒಬ್ಬ ಸದಸ್ಯನಾಗಿ, ನಿಕೊದೇಮನು ಮುಂದೆ ಬಂದನು ಹಾಗೂ ತನ್ನ ಜೊತೆಯವರಿಗೆ, ಧರ್ಮಶಾಸ್ತ್ರವು ಮೊದಲು ಒಬ್ಬನನ್ನು ವಿಚಾರಿಸಿ ಅವನು ಮಾತಾಡುವದೇನೆಂದು ತಿಳಿದುಕೊಳ್ಳದೆ ಅವನ ವಿಷಯವಾಗಿ ತೀರ್ಪುಮಾಡುವದಿಲ್ಲ ಎಂದು ಹೇಳಿದನು (7:50, 51). ಇದು ಯೇಸುವಿನಲ್ಲಿ ನಂಬಿಕೆಯ ಅರಿಕೆಯಂತೆ ಅರ್ಹವಾಗಿ ಮಾಡಲ್ಪಡುವದಿಲ್ಲ, ಆದರೆ ಮೊದಲ ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದಿದ್ದ ಅಂಜುಬುರುಕನಾದ, ದೇವರ ಅನ್ವೇಷಕನಿಗೆ ಅದು ಒಂದು ದೊಡ್ಡ ಹೆಜ್ಜೆಯಾಗಿತ್ತು. ನಿಕೊದೇಮನಿಗೆ ಯೇಸುವಿನಲ್ಲಿ ನಂಬಿಕೆಯು ಬೆಳೆಯುತ್ತ ಬಂದಿತು; ಆದರೆ ಅವನು ಇನ್ನೂ ಗುಪ್ತ ಶಿಷ್ಯನಾಗಿದ್ದನು ಯಾಕಂದರೆ ಅವನು ಯೆಹೂದಿ ನಾಯಕರಿಗೆ ಭಯಪಟ್ಟನು. ನಿಕೊದೇಮನ ವಿವರಣೆಗೆ ಅವರ ಉತ್ತರವು ವೇಗವಾದದ್ದು ಕೋಪ ಭರಿತವಾದದ್ದೂ ಆಗಿತ್ತು; "ನೀನು ಗಲಿಲಾಯದವನೋ? ..." (7:52). ಅವರು ವಿವೇಚಿಸುತ್ತಿದ್ದಿಲ್ಲ; ಅವರು ಪ್ರತಿಕ್ರಿಯೆ ತೋರಿಸುತ್ತಿದ್ದರು. ಅವರು ಸತ್ಯವನ್ನು ಕಂಡು ಕೊಳ್ಳಲು ಬಯಸಲಿಲ್ಲ; ಯೇಸುವಿನ ಪರವಾಗಿ ಬರಲು ಧೈರ್ಯಕೊಳ್ಳುವವರನ್ನು ಮೌನವಾಗಿರಿಸಲು ಬಯಸಿದರು. "ನೀನು ಹುಚ್ಚನೋ, ಮೂರ್ಖನೋ, ನಾಸ್ತಿಕನೋ?" ಎಂದು ಕೇಳುವುದು ಅವರ ಪ್ರಶ್ನೆಯ ವಿಧವಾಗಿತ್ತು. ನಿಕೊದೇಮನ ಪುನಃ ಕಾಣಿಸಿಕೊಳ್ಳುವಿಕೆಯು ಯೇಸುವು ವಾದಗ್ರಸ್ತವಾದ ಹಾಗೂ ವಿಭಾಗಿಸುವಂಥ ವ್ಯಕ್ತಿಯಂತೆ ಪ್ರಸ್ತಾಪಿಸಲ್ಪಟ್ಟ ಈ ಅಧ್ಯಾಯಕ್ಕೆ ಯೊಗ್ಯವಾದ ಮುಕ್ತಾಯದಂತಿರುತ್ತದೆ. ಅತೀ ಹೆಚ್ಚಾಗಿ ಭಿನ್ನಭಿಪ್ರಾಯ ಹುಟ್ಟಿಸುವ ಜನರು ಆ ರೀತಿಯಲ್ಲಿ ಇರುತ್ತದೆ. ಯಾಕಂದರೆ ಅಲ್ಪತೆಯು ಇಲ್ಲವೇ ಗರ್ವವು ಅದಕ್ಕೆ ಕಾರಣವಾಗುತ್ತದೆ. ಆದರೆ ಅದು ಯೇಸುವಿನೊಂದಿಗೆ ಹಾಗಿರಲಿಲ್ಲ. ಈ ಸುವಾರ್ತೆಯ ಪ್ರಾರಂಭದಿಂದ, ಯೇಸುವು ಸತ್ಯದ ಮೇಲೆ ಅವಲಂಭಿಸಿ ಕಠಿಣವಾದ ಆಯ್ಕೆಯಲ್ಲಿ ಜನರನ್ನು ಒತ್ತಾಯಿಸುತ್ತಾನೆಂದು ಯೋಹಾನನು ಘೋಷಿಸಿದನು (1:11, 12). ಅಂತ್ಯದಲ್ಲಿ, ಜನರು ಆತನನ್ನು ಪ್ರೀತಿಸುವರು ಇಲ್ಲವೇ ಆತನನ್ನು ದ್ವೇಷಿಸುವರು (7:7). ಯೇಸುವು ನಮ್ಮಲ್ಲಿ ಯಾರಿಗೂ ಅನಿಶ್ಚಿತತೆಯ ಅಪಾಯಕರ ಸುಖಭೋಗವಿರುವಂತೆ

ಬಿಡುವದನ್ನು ನಿರಾಕರಿಸುತ್ತಾನೆ.

## ಮುಕ್ತಾಯ

ಅಮೇರಿಕದ ಚರಿತ್ರೆಯಲ್ಲಿ, ಅಲಾಮೊದ ಯುದ್ಧವು ಧೈರ್ಯದ ತೀರ್ಮಾನದ ಒಂದು ಪ್ರಮುಖ ಉದಾಹರಣೆಯಾಗಿ ನಿಂತುಕೊಳ್ಳುತ್ತದೆ. 1836ರಲ್ಲಿ ಜನರಲ್ ಸಾಂಟಾ ಅನ್ನಾನಿಂದ ನಡಿಸಲ್ಪಟ್ಟ ಆರು ಸಾವಿರ ಮೆಕ್ಸಿಕನ್ ಸೈನ್ಯಗಳಿಗೆ ವಿರುದ್ಧವಾಗಿ ಇನ್ನೂರಕ್ಕಿಂತಲೂ ಕಡಿಮೆ ಜನರ ಒಂದು ಗುಂಪು ಸೇನ್ ಅಂಟೋನಿಯೊದಲ್ಲಿ ಒಂದು ಚಿಕ್ಕ ಮಿಶನ್‌ನ್ನು ಕಾಪಾಡಿತು. ಎರಡು ವಾರಗಳ ವರೆಗೆ ಅವರು ಅಲಾಮೊವನ್ನು ಅಸಾಧ್ಯವಾದ ವಿರೋಧಗಳಿಗೆ ವಿರುದ್ಧವಾಗಿ ಕಾಪಾಡಿದರು. ಆಗ, ಮಾರ್ಚ್ 5ರಂದು, ಕೊನೆಯ ದಾಳಿಯ ಹಿಂದಿನ ರಾತ್ರಿ, ವಿಲಿಯಮ್ ಬ್ಯಾರೆಟ್ ಟ್ರವಿಸ್, ಟೆಕ್ಸನ್ನರ ಕಮಾಂಡರನು, ತನ್ನ ಜನರ ಒಂದು ಕೂಟವನ್ನು ಕರೆದನು. ಮರುದಿನ ಗೋಡೆಗಳನ್ನು ಒಡೆದು ದಾಳಿ ಮಾಡುವವರನ್ನು ತಾನು ತಿಳಿದಿರುವೆನೆಂದು ಅವರಿಗೆ ಹೇಳಿ, ತನ್ನ ಖಡ್ಗವನ್ನು ತೆಗೆದುಕೊಂಡು ಮಣ್ಣಿನಲ್ಲಿ ಒಂದು ಗೆರೆ ಎಳೆದನು. ಉಳಿದುಕೊಂಡು ಅಲಾಮೊವನ್ನು ಕಾಪಾಡಲು ಬಯಸುವವರು ಗೆರೆಯನ್ನು ದಾಟಿ ಬರುವಂತೆ ಅವನು ಆಮಂತ್ರಿಸಿದನು. ಒಬ್ಬರ ನಂತರ ಒಬ್ಬರು ಅವರು ಮಾಡಿದರು. ಜಿಮ್‌ಬೋವಿ, ಅಪ್ಪ ಸ್ಥತೆಯಿಂದ ಹಾಸಿಗೆಯ ಮೇಲೆ ಇದ್ದವನು ಗೆರೆಯನ್ನು ದಾಟಿ ಒಯ್ಯಲ್ಪಡಬೇಕೆಂದು ಕೇಳಿಕೊಂಡನು. 184 ಜನರಲ್ಲಿ ಒಬ್ಬನು ಮಾತ್ರ ಗೆರೆಯನ್ನು ದಾಟುವುದನ್ನು ತಿರಸ್ಕರಿಸಿದನು. ಮರುದಿನ ಅಲಾಮೋವನ್ನು ರಕ್ಷಿಸುವ ಮೇಲೆ ನಿಲ್ಲುವುದು ಇರಲಿಲ್ಲ! ತಿರ್ಮಾನವು ಮಾಡಲ್ಪಡಲೇ ಬೇಕಾಗಿತ್ತು.

ಕಳೆದ ವರ್ಷ ಒಂದು ಸುವಾರ್ತಾ ಕೂಟದಲ್ಲಿ ಒಬ್ಬ ಕಾಲೇಜಿನ ಯುವ ವಿಧಾರ್ಥಿಯು ಆಮಂತ್ರಣಕ್ಕೆ ಉತ್ತರಕೊಟ್ಟನು. ಅವನು ಮಾಡಿದ ಹೇಳಿಕೆಯು ಯೋಹಾನ 7ರ ಪುಟಗಳಿಂದ ಬಂದದ್ದಾಗಿತ್ತು. ಒಂದು ಕಾರ್ಡಿನ ಮೇಲೆ ಅವನು, "ಬಹಳ ಸಮಯದಿಂದ ಬೇಲಿಯ ಮೇಲೆ ಕುಳಿತುಕೊಳ್ಳಲು ಪ್ರಯತ್ನಿಸುತ್ತಿದ್ದನು, ಬೇಲಿಯು ಇರುವದಿಲ್ಲವೆಂಬುದನ್ನು ಮಾತ್ರವೇ ಕಂಡುಕೊಂಡೆನು ಎಂದು ಬರೆದನು" ಯೇಸುವಿನ ಬಗ್ಗೆ ಬರುವಾಗ, ತೀರ್ಮಾನಿಸದೇ ಇರುವದಕ್ಕೆ ಮತ್ತು ಬೇಲಿಯ ಮೇಲೆ ಕುಳಿತು ಕೊಳ್ಳುವದಕ್ಕೆ ಮಾರ್ಗವೇ ಇರಲಿಲ್ಲ. ಆತನಿಗೆ ಪರವಾಗಿ ಇಲ್ಲವೇ ವಿರುದ್ಧವಾಗಿ ನೀನು ತೀರ್ಮಾನಿಸಿರುವಿಯೋ?

---

ಟಿಪ್ಪಣಿಗಳು

[1]*The Bible, an American Translation*, ed. J. M. Powis Smith and Edgar J. Goodspeed (Chicago: University of Chicago Press, 1939). [2]ಅಪೊಸ್ತಲರ ಕೃತ್ಯಗಳು 4:13ರಲ್ಲಿ ಸನ್ಹೆದ್ರಿನ ಸಭೆಯ ಮುಂದೆ ನಿಂತು ಕೊಂಡ ಪೇತ್ರ, ಯೋಹಾನರ ಬಗ್ಗೆ ಅವರ ಧೈರ್ಯ ಹಾಗೂ ಭರವಸೆಯ ನಿಮಿತ್ತವಾಗಿ ಇದೇ ರೀತಿಯ ಟೀಕೆ ಮಾಡಲ್ಪಟ್ಟಿತು. [3]Dietrich Bonhoeffer, *The Cost of Discipleship* (New York: Macmillan Co., 1937), 69. [4]"Trust and Obey" by D. B. Towner. Music by J. H. Sammis. [5]ನೋಡಿರಿ 5:1-18. [6]R. K. Harrison, "Feast of Booths," in *The International Standard Bible Encyclopedia,* rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:535.